ದಿಃ 21.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 17.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದು ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ

2. 2 ನೇ ಮತ್ತು 3 ನೇ ವಾದಿಗಳು ನನಗೆ ನೀಡಿರುವ ಅಧಿಕಾರ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ವಂಶ ವೃಕ್ಷವನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ಎಂ.ಆರ್.ನಂಬರ್ ಹೆಚ್.10/2019-20 ಅನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ಕೂಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ದಿಃ 10.01.2021 ರಂದು ಬಣಕಲ್ ಪೊಲೀಸ್ ಠಾಣೆಗೆ ನೀಡಿದ ದೂರಿನ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ದಿಃ 28.11.2022 ರಂದು ಬಣಕಲ್ ಗ್ರಾಮ ಪಂಚಾಯಿತಿಗೆ ನೀಡಿದ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ಎಂ.ಆರ್.ನಂಬರ್ 12/2001-002 ರ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ಕೂಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ ಕೈ ಬರಹದ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ಕೂಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2002-03 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು, ಕೂಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2003-04 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.10 ಎಂದು ಗುರುತಿಸಲಾಯಿತು, ಕೂಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2005-06 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು ಗುರುತಿಸಲಾಯಿತು, ಕೂಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2007-08 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು, ಕೂಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2009-10 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.13 ಎಂದು ಗುರುತಿಸಲಾಯಿತು, ಕೂಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2010-11

ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.14 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2011-12 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.15 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2012-13 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.16 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2012-13 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.17 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2014-15 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.18 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2016-17 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.19 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2017-18 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.20 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2019-20 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.21 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2020-21 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.22 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2021-22 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.23 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2023-24 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.24 ಎಂದು ಗುರುತಿಸಲಾಯಿತು, ಕೊಡಹಳ್ಳಿ ಗ್ರಾಮದ ಸರ್ವೆ ನಂಬರ್ 34/4 ರ 2024-25 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.25 ಎಂದು ಗುರುತಿಸಲಾಯಿತು.

3. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲು ಶ್ರೀ ಎಂ.ವಿ.ಜೆ ವಕೀಲರಿಂದ 1 ಮತ್ತು 3 ನೇ ಪ್ರತಿವಾದಿ ಪರವಾಗಿ</u>**

4. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ಸಮಯಾವಕಾಶ ನೀಡಲಾಗಿದೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.೯.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 06.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಂ.ವಿ.ಜೆ ವಕೀಲರಿಂದ 1 ಮತ್ತು 3 ನೇ ಪ್ರತಿವಾದಿ ಪರವಾಗಿ

5. ನನ್ನ ಮದುವೆ 30 ವರ್ಷಗಳ ಹಿಂದೆ ಆಗಿದೆ. ನನ್ನನ್ನು ಬಣಕಲ್ ಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ಗಂಡ ಈಗ ಬದುಕಿಲ್ಲ. ನಾನು ಮದುವೆಯಾದ ಬಳಿಕ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೆ. ನನ್ನ ಗಂಡ ತೀರಿಕೊಂಡ ಬಳಿಕ 1 ವರ್ಷ ನನ್ನ ಗಂಡನ ಮನೆಯಲ್ಲಿ ವಾಸವಿದ್ದೆನು, ನಂತರ ಈಗ್ಗೆ 5 ವರ್ಷಗಳಿಂದ ನಾನು ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. 2 ನೇ ವಾದಿ ನನ್ನ ಮಗ. 3 ನೇ ವಾದಿ ನನ್ನ ಮಗಳು. ಈ ದಾವೆಯನ್ನು ನಾವು ಪ್ರತಿವಾದಿಗಳ ಮೇಲೆ ಹೂಡಿದ್ದೇವೆ. 1 ಮತ್ತು 2 ನೇ ಪ್ರತಿವಾದಿಯರು ನನ್ನ ಗಂಡನ ಅಣ್ಣಂದಿರು ಮತ್ತು 3 ನೇ ಪ್ರತಿವಾದಿ ನನ್ನ ಗಂಡನ ತಮ್ಮ. 3 ಜನ ಪ್ರತಿವಾದಿಯರು ಒಂದೇ ಮನೆಯಲ್ಲಿ ವಾಸವಿದ್ದಾರೆ. ಪ್ರತಿವಾದಿಯರು ವಾಸವಿರುವ ಮನೆಯ ಚಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಆ ಮನೆಯ ನಂಬರ್ ನನಗೆ ಗೊತ್ತಿಲ್ಲ.

6. ನನ್ನ ಗಂಡ ಬದುಕಿದ್ದಾಗ ಆಟೋ ಓಡಿಸುತ್ತಿದ್ದರು. 2 ನೇ ಪ್ರತಿವಾದಿ ಕಾಫಿ ಕ್ಯೂರಿಂಗ್ ಕೆಲಸಕ್ಕೆ ಹೋಗುತ್ತಿದ್ದಾರೆ. 1 ನೇ ಪ್ರತಿವಾದಿ ಅಂಗವಿಕಲನಾಗಿರುವುದರಿಂದ ಕೆಲಸ ಮಾಡುವುದಿಲ್ಲ. 1 ನೇ ಪ್ರತಿವಾದಿ ನಮ್ಮ ಜೊತೆ ಚೆನ್ನಾಗಿ ಇದ್ದಾರೆ. 3 ನೇ ಪ್ರತಿವಾದಿಯು ನಮ್ಮ ಜೊತೆ ಚೆನ್ನಾಗಿ ಇದ್ದಾರೆ.

7. ದಾವ ಆಸ್ತಿ ಬಣಕಲ್ ನಲ್ಲಿ ಇರುತ್ತದೆ. ದಾವ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವ ಆಸ್ತಿಯ ಸರ್ವೆ ನಂಬರ್ 34/4 ಆಗಿರುತ್ತದೆ. ದಾವ ಆಸ್ತಿ ನನ್ನ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ. ದಾವ ಆಸ್ತಿ ನನಗೆ ಹಕ್ಕು ಇದ್ದು, ನನ್ನ ನಂತರ ನನ್ನ ಮಕ್ಕಳಿಗೆ ಹಕ್ಕು ಬರುತ್ತದೆ ಎಂದರೆ ಸರಿ. ನನ್ನ ಮಕ್ಕಳನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಏಕೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಯಾವ ದಿನಾಂಕದಂದು ಮನೆಯಲ್ಲಿ ಇರುವ ವಸ್ತುಗಳನ್ನು ಆಚೆ ಹಾಕಿದ್ದರು ಎಂದು ಹೇಳಲು ಆಗುವುದಿಲ್ಲ. ನಾವು ವಾಸ ಮಾಡುತ್ತಿದ್ದ ಮನೆಯ ಗೋಡೆ ಬಿದ್ದ ಕಾರಣ ನಾವು ಮನೆಯಿಂದ ಆಚೆ ಬಂದಿದ್ದೆವು. ನಾವು ಉಪಯೋಗಿಸುತ್ತಿದ್ದ ಗೃಹ ಉಪಯೋಗ ವಸ್ತುಗಳು ಗೋಡೆ ಬಿದ್ದ ಕಾರಣ ಅದರ ಅಡಿಯಲ್ಲಿ ಹೋಗಿದ್ದವು. ನಾನು ಪೊಲೀಸರಿಗೆ ದೂರನ್ನು 3 ನೇ ಪ್ರತಿವಾದಿಯ ಮೇಲೆ ದಾಖಲಿಸಿದ್ದೆನು. ಪೊಲೀಸರು 3 ನೇ ಪ್ರತಿವಾದಿಯ ಮೇಲೆ ಪ್ರಕರಣವನ್ನು ದಾಖಲು ಮಾಡಿದ್ದರು. ಆ ದಾಖಲೆ ನಮ್ಮ ಬಳಿ ಇರುತ್ತದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ದೂರನ್ನು ನೀಡಿದ ಬಳಿಕ ಪೊಲೀಸರು 3 ನೇ ಪ್ರತಿವಾದಿಯನ್ನು ಕರೆಸಿ ಆಸ್ತಿಯ ಬಗ್ಗೆ ಪಂಚಾಯಿತಿಯನ್ನು ಮಾಡಿ ಬರವಣಿಗೆ ಮಾಡಿದ್ದು ನನಗೆ ನೆನಪಿಲ್ಲ.

8. ನಿ.ಪಿ.7 ದಾಖಲೆಯ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಬಿದ್ದು ಹೋದ ಮನೆಯನ್ನು 3 ನೇ ಪ್ರತಿವಾದಿ ರಿಪೇರಿ ಮಾಡಿದ್ದರು. ನಾನು ಸಹ ಮನೆ ರಿಪೇರಿ ಮಾಡಲು 25 ಸಾವಿರ ಹಣ ನೀಡಿದ್ದೆ. ದಾವೆಯಲ್ಲಿ ಆ ಮನೆ ರಿಪೇರಿ ಮಾಡಿಸಲು ನಾನು 25 ಸಾವಿರ ಹಣ ನೀಡಿದ್ದೆ ಎಂದು ಹೇಳಿ ಬರೆಸಿಲ್ಲ. ನಾನು ಯಾವುದೇ ಹಣ ನೀಡದೇ ಇದ್ದರು ಸಹ 25 ಸಾವಿರ ಹಣ ಮನೆ ರಿಪೇರಿಗಾಗಿ ನೀಡಿದ್ದೆ ಎಂದು ಈ ದಿನ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ
ಮಾ